106 ಶ್ರೀ ಖಾದರ್. ಯು.ಟಿ. [ಮಂಗಳೂರು]
ಮಾನ್ಯ ಕಾರ್ಮಿಕ ಸಚಿವರು

****

ಅ ಕೇಂದ್ರ ಸರ್ಕಾರವು ರಾಜ್ಯದ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ರಾಜ್ಯಕ್ಕೆ ಯಾವ ಯಾವ ಯೋಜನೆಯಡಿ ಹಣವನ್ನು ಬಿಡುಗಡೆ ಮಾಡಿಕೊಡಲಾಗಿದೆ;

ಕೇಂದ್ರ ಸರ್ಕಾರವು ರಾಜ್ಯದ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಯಾವುದೇ ಯೋಜನೆಯಡಿಯಲ್ಲಿ ಇದುವರೆವಿಗೂ ರಾಜ್ಯ ಸರ್ಕಾರಕ್ಕೆ ಹಣ ಬಿಡುಗಡೆ ಮಾಡಿರುವುದಿಲ್ಲ.

ಆ ಹಾಗಿದ್ದಲ್ಲಿ, ಅನುಷ್ಠಾನಗೊಳಿಸಿದ ಯೋಜನೆಯ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು [ಜಿಲ್ಲಾವಾರು ವಿವರ ನೀಡುವುದು];

ಉದ್ಭವಿಸುವುದಿಲ್ಲ.

ಇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಅಸಂಘಟಿತ ಕಾರ್ಮಿಕರುಗಳಿಗೆ ಅನುಷ್ಠಾನಗೊಂಡ ಯೋಜನೆಗಳು ತಲುಪದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉದ್ಭವಿಸುವುದಿಲ್ಲ.

ಈ ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ಉದ್ಭವಿಸುವುದಿಲ್ಲ.

108 ಶ್ರೀ ಖಾದರ್. ಯು.ಟಿ. [ಮಂಗಳೂರು]
ಮಾನ್ಯ ಕಾರ್ಮಿಕ ಸಚಿವರು

******

ಅ ಸಂಘಟಿತ ರಾಜ್ಯದಲ್ಲಿರುವ ಅಸಂಘಟಿತ ಬೀಡಿ ಕಾರ್ಮಿಕರಿಗೆ ಯಾವ ಯಾವ ಯೋಜನೆಯಡಿ ವಸತಿ ಸೌಲಭ್ಯವನ್ನು ಒದಗಿಸಿ ಕೊಡುತ್ತಿದೆ;

ಸರ್ಕಾರವು ವಿಶೇಷ ಉದ್ಯೋಗ ಗುಂಪಿನ ಯೋಜನೆಯಡಿಯಲ್ಲಿ ಬೀಡಿ ಕಾರ್ಮಿಕರಿಗಾಗಿ ವಸತಿ ಸೌಲಭ್ಯವನ್ನು ಕಲ್ಪಿಸಿದೆ. ಇದಕ್ಕಾಗಿ ಕೇಂದ್ರ ಸರ್ಕಾರವು ಪರಿಷ್ಕೃತ ಸಮಗ್ರ ವಸತಿ ಯೋಜನೆಯಡಿಯಲ್ಲಿ ರೂ. 40,000/–ಗಳ ಸಹಾಯಧನ ನೀಡುತ್ತಿದ್ದು, ರಾಜ್ಯ ಸರ್ಕಾರವು ಗರಿಷ್ಟ ರೂ. 40,000/–ಗಳ ಸಾಲವನ್ನು ಒದಗಿಸುತ್ತಿದೆ.

ಆ ಹಾಗಿದ್ದಲ್ಲಿ, ಯೋಜನೆಗಳ ವಿವರ ನೀಡುವುದು;

ಕೇಂದ್ರ ಸರ್ಕಾರದಿಂದ ಸಹಾಯ ಧನ: ರೂ.40,000/–